‘ಆಯ್ಕೊಂಡು ತಿನ್ನೋ ಕೋಳಿ ಕಾಲು ಮುರಿದ ಹಾಗೆ’ ಎಂಬ ಮಾತೊಂದು ಚಾಲ್ತಿಯಲ್ಲಿದೆ.

ಕೋಳಿ ತನ್ನ ಆಹಾರವನ್ನು ಹುಡುಕಿಕೊಳ್ಳುವುದು ಕಾಲಿನಲ್ಲಿ ಕೆದರುವ ಮೂಲಕ. ಅದರ ಬಳಿ ಇರುವ ಆಸ್ತಿ–ಆಧಾರ ಎರಡೂ ಅದರ ಕಾಲೇ. ಆ ಕಾಲನ್ನೇ ಮುರಿದುಬಿಟ್ಟರೆ? ಪರಿಶ್ರಮದಿಂದ ಅಂದಂದಿನ ಅನ್ನವನ್ನು ಅಂದಂದೇ ದುಡಿದು ಬದುಕುತ್ತಿರುವ ಜೀವಿಗಳ ದುಡಿಮೆಯ ಮಾರ್ಗವನ್ನೇ ಕಡಿದು ಹಾಕುವುದು ಕ್ರೌರ್ಯ ಎಂಬ ಭಾವ ಮೇಲಿನ ಮಾತಿನಲ್ಲಿದೆ. ಮೇಲ್ನೋಟಕ್ಕೆ ವ್ಯಕ್ತವಾಗುತ್ತಿರುವ ವ್ಯಂಗ್ಯದ ದೃಷ್ಟಿಯಿಂದಷ್ಟೇ ಅಲ್ಲದೆ, ಹುದುಗಿರುವ ಗಂಭೀರ ಧ್ವನಿಯ ಕಾರಣದಿಂದಲೂ ಆ ಮಾತು ಇಂದಿನ ಚಂದನವನಕ್ಕೆ ಒಪ್ಪುವ ಹಾಗಿದೆ.

2021ರ ಕೊನೆಯ ಮೆಟ್ಟಿಲ ಮೇಲೆ ನಿಂತು ಕನ್ನಡ ಚಿತ್ರರಂಗದತ್ತ ಹೊರಳಿ ನೋಡುವ ಸಂದರ್ಭದಲ್ಲಿ ಈ ಮಾತು ನೆನಪಾಗಲು ಖಂಡಿತ ಕಾರಣವಿದೆ. ಒಂದಲ್ಲ, ಹಲವು ಕಾರಣಗಳಿವೆ.

‘ಕೊರೊನಾ’ ಎಂಬ ಕರಾಳ ವೈರಸ್ ಇಡೀ ಜಗತ್ತನ್ನು ತನ್ನ ಮುಷ್ಟಿಯಲ್ಲಿ ಬಿಗಿದು ಹಿಡಿಯುವ ಸಾಕಷ್ಟು ಮೊದಲೇ ಚಂದನವನ ಬೇರೆ ಬೇರೆ ಕಾರಣಗಳಿಂದ ಏದುಸಿರು ಬಿಡಲು ಆರಂಭಿಸಿತ್ತು. ಪರಭಾಷಾ ಚಿತ್ರಗಳ ದಾಳಿ, ಡಬ್ಬಿಂಗ್ ಭೂತದ ನರ್ತನ, ಚಿತ್ರಮಂದಿರಗಳ ಸಮಸ್ಯೆ, ಮಲ್ಟಿಪ್ಲೆಕ್ಸ್ ಮೇಲಾಟಗಳು, ಸ್ಟಾರ್‌ವಾರ್, ಸಮರ್ಥ ನಾಯಕತ್ವದ ಕೊರತೆ, ಬಡಿದೆಚ್ಚರಿಸಲೂ ಸಾಧ್ಯವಿಲ್ಲದಷ್ಟು ‘ಜಡವಾಗಿರುವ’ ಚಲನಚಿತ್ರ ವಾಣಿಜ್ಯ ಮಂಡಳಿಯ ನಿಷ್ಕ್ರಿಯತೆ – ಹೀಗೆ ಹತ್ತು ಹಲವು ಸಮಸ್ಯೆಗಳು ಚಂದನವನವೆಂಬ ಕೀಲುಸವೆದ ಸಿನಿಮಾತೇರಿನ ಸುತ್ತ ದಿಗಿಣ ಕುಣಿಯಲಾರಂಭಿಸಿದ್ದವು. ಸ್ಟಾರ್ ನಟರೆಲ್ಲ ವರ್ಷಕ್ಕೊಂದು ಸಿನಿಮಾ ಮಾಡಿಕೊಂಡು ಆರಾಮ ಜೀವನ ನಡೆಸುತ್ತಿದ್ದರೆ, ವಾರಕ್ಕೆ ಎಂಟು ಹತ್ತರಂತೆ ಹೊಸಬರ ಸಿನಿಮಾಗಳು ಚಿತ್ರಮಂದಿರಕ್ಕೆ ಮುಕುರುತ್ತಿದ್ದವು. ಬಂದಷ್ಟೇ ವೇಗವಾಗಿ ಮಾಯವೂ ಆಗಿಬಿಡುತ್ತಿದ್ದವು. ವರ್ಷದ ಸಕ್ಸಸ್ ರೇಟ್ ಶೇ. 5 ದಾಟುತ್ತಿರಲಿಲ್ಲ. ಸ್ಟಾರ್ ನಟರೆನಿಸಿಕೊಂಡವರು ಸಿನಿಮಾಗಿಂತ ವೈಯಕ್ತಿಕ ಕಾರಣಗಳಿಗಾಗಿ ಸುದ್ದಿಯಲ್ಲಿರುತ್ತಿದ್ದುದೇ ಹೆಚ್ಚು.

ಹೀಗೆ ಕೋಲು ಹಿಡಿದುಕೊಂಡು ಬಾಗಿಯೇ ನಡೆಯುತ್ತಿದ್ದ ಚಂದನವನದ ಬೆನ್ನ ಮೇಲೆ ಕೊರೊನಾ ದೊಣ್ಣೆಯ ಪ್ರಹಾರವಾಗಿದ್ದು 2020ರಲ್ಲಿ. ಮೊದಲ ಎರಡೂವರೆ ತಿಂಗಳು ಮತ್ತು ಕೊನೆಯ ಎರಡು ತಿಂಗಳು ಬಿಟ್ಟರೆ ಆ ವರ್ಷವಿಡೀ ಚಿತ್ರರಂಗದ ಬಾಗಿಲು ತೆರೆದಿದ್ದೇ ಇಲ್ಲ. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಬಿಡುಗಡೆಯಾದ ಚಿತ್ರಗಳೂ ಬೆರಳೆಣಿಕೆಯಷ್ಟು. ಬರೀ ಚಿತ್ರಮಂದಿರಗಳಷ್ಟೇ ಅಲ್ಲ, ಚಿತ್ರನಿರ್ಮಾಣದ ಬಹುತೇಕ ಎಲ್ಲ ಕೆಲಸಗಳೂ ಸ್ಥಗಿತಗೊಂಡಿದ್ದವು. ಇಡೀ ಜಗತ್ತೇ ಮಾರಣಾಂತಿಕ ಕಾಯಿಲೆಗೆ ಒಳಗಾಗಿ ತುರ್ತು ನಿಗಾ ಘಟಕದಲ್ಲಿರುವ ರೋಗಿಯ ಹಾಗಾಗಿರುವಾಗ, ಕನ್ನಡ ಚಿತ್ರರಂಗದ ಪಾಡು ಸುಧಾರಿತವಾಗಿರಲು ಹೇಗೆ ತಾನೆ ಸಾಧ್ಯ?

ಇದು ಬರೀ ಚಿತ್ರರಂಗದ ಚಟುವಟಿಕೆಗಳು ನಿಂತುಹೋದ ದಿಗಿಲಷ್ಟೇ ಆಗಿರಲಿಲ್ಲ. ಚಿತ್ರರಂಗದ ಹಲವು ಗಣ್ಯರು, ಕಾರ್ಮಿಕರು ಅಸುನೀಗಿದ ಸೂತಕವೂ ಆ ದಿನಗಳಿಗೆ ಅಂಟಿಕೊಂಡಿತ್ತು. ಎಷ್ಟೋ ಕಾರ್ಮಿಕರ ಬದುಕು ಮೂರಾಬಟ್ಟೆಯಾದ ನೋವು ಆ ದಿನಗಳನ್ನು ಆವರಿಸಿತ್ತು. ಕೋಟ್ಯಂತರ ರೂಪಾಯಿ ಸಾಲ ಮಾಡಿದ ಅದೆಷ್ಟೋ ನಿರ್ಮಾಪಕರ ಭವಿಷ್ಯದ ದಾರಿಯಲ್ಲಿ ಇದ್ದಕ್ಕಿದ್ದ ಹಾಗೆ ಕತ್ತಲುಗಟ್ಟಿದ ಭೀತಿ ಮುತ್ತಿಕೊಂಡಿತ್ತು.

ಆದರೆ ಉಸಿರು ನಿಲ್ಲುವ ಕೊನೇಗಳಿಗೆಯವರೆಗೂ ಮನುಷ್ಯ ಬದುಕಿ ಉಳಿಯುವ ಪ್ರಯತ್ನ ನಡೆಸಿಯೇ ನಡೆಸುತ್ತಾನೆ. ಇನ್ನು ‘ಮರಳಿ ಯತ್ನವ ಮಾಡು’ ಎನ್ನುವ ನಂಬಿಕೆಯನ್ನೇ ಉಸಿರಾಡುವ ಹಲವು ಸಾಹಸಿಗರಿಂದ ರೂಪುಗೊಂಡ ಚಿತ್ರರಂಗ ಸುಮ್ಮನಿರುತ್ತದೆಯೇ? ಎಷ್ಟೇ ಕತ್ತಲಾವರಿಸಿದ್ದರೂ ಎಲ್ಲರ ಎದೆಯಲ್ಲಿ ಒಂದು ನಂಬಿಕೆಯ ದೀಪ ಉರಿಯುತ್ತಿತ್ತು. ‘ಇಂದಲ್ಲ ನಾಳೆ ಜಗತ್ತಿಗೇ ಮುತ್ತಿಕೊಂಡಿರುವ ಈ ಕೊರೊನಾ ಕಾರ್ಮೋಡ ಕರಗುತ್ತದೆ. ಎಲ್ಲ ಮೊದಲಿನಂತಾಗುತ್ತದೆ’ ಎಂಬ ನಂಬಿಕೆಯದು. ಆ ನಂಬಿಕೆಯ ದೀಪಕ್ಕೆ ತೈಲವೆರೆಯುವ ಹಾಗೆ ನವೆಂಬರ್ ಹೊತ್ತಿಗೆ ಚಿತ್ರಮಂದಿರಗಳ ಬಾಗಿಲು ಮತ್ತೆ ತೆರೆಯಲು ಅನುಮತಿ ಸಿಕ್ಕಿತ್ತು. ಶೇ. 50ರಷ್ಟು ಪ್ರೇಕ್ಷಕರಿಗೆ ಮಾತ್ರವೇ ಸರ್ಕಾರ ಅನುಮತಿ ಕೊಟ್ಟಿತ್ತು.

ಕೊಚ್ಚಿಕೊಂಡು ಹೋಗುತ್ತಿರುವವನಿಗೆ ಹುಲ್ಲುಕಡ್ಡಿ ಸಿಕ್ಕರೆ ಬಿಟ್ಟಾನೆಯೇ? ತುಸು ಹಿಂಜರಿಯುತ್ತಲಾದರೂ ಹಲವು ಸಿನಿಮಾಗಳು ಚಿತ್ರಮಂದಿರದ ಕಡೆಗೆ ನಡೆದುಬರಲಾರಂಭಿಸಿದವು. ಆದರೆ ಪ್ರೇಕ್ಷಕರು ಬಂದರಷ್ಟೇ ಅವುಗಳಿಗೆ ಉಳಿಗಾಲವಲ್ಲವೇ? ಪ್ರೇಕ್ಷಕರಿಗಿನ್ನೂ ಕೊರೊನಾ ಭಯ ಹೋಗಿರಲಿಲ್ಲ.

ಈ ಭಯ ಕೊಂಚ ತಿಳಿಗೊಂಡಿದ್ದು 2021ರಲ್ಲಿ.

## 2021ರ ಆರಂಭ

2021 ಅಂದರೆ ಈ ವರ್ಷ ತನ್ನೊಟ್ಟಿಗೆ ಹೊಸ ನಂಬಿಕೆಯೊಂದನ್ನು ಹೊತ್ತು ತಂದಿತ್ತು. ಕೊರೊನಾ ಪ್ರಕರಣಗಳು ಕಡಿಮೆಗೊಂಡು, ಜನರು ಮನೆಬಿಟ್ಟು ಓಡಾಡಲಾರಂಭಿಸಿದ್ದರು. ದುಬಾರಿ ಬಾಡಿಗೆಯ ಕ್ಯಾಮೆರಾಗಳು ದೂಳು ಒರೆಸಿಕೊಂಡು, ಕಣ್ಣುಜ್ಜಿಕೊಳ್ಳುತ್ತ ಹೊರಗೆ ಬೀಳಲಾರಂಭಿಸಿದ್ದವು. ಲಾಕ್‌ಡೌನ್ ಕಾಲದಲ್ಲಿ ವಿಡಿಯೊ ಕಾಲ್, ಫೋನ್ ಮೂಲಕ ಕಥೆಗಳನ್ನು ಚರ್ಚಿಸಿದ್ದ ನಟ–ನಟಿಯರು ಮುಖಾಮುಖಿ ಭೇಟಿಯಾಗಿ ಒಪ್ಪಂದಗಳಿಗೆ ಸಹಿ ಹಾಕಲು ಶುರುಮಾಡಿದ್ದರು. ಎಲ್ಲೋ ಊರಿಗೆ ಹೋಗಿ ಹೊಟ್ಟೆಪಾಡಿಗಾಗಿ



‘ಸಖತ್’ ಸಿನಿಮಾದಲ್ಲಿ ಗಣೇಶ್ ಮತ್ತು ಸುರಭಿ